ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಯೋಜನೆಯು ಕಾರ್ಯ ಸಾಧುವಲ್ಲವೆಂದು ಕೈಬಿಡಲಾಗಿದೆ.

ಆ) ಉದ್ಭವಿಸುವುದಿಲ್ಲ.

## ತುಂಗಭದ್ರಾ ಮೇಲ್ದಂಡೆ ಬಗ್ಗೆ

೩೨ (೧೮೬) ಕೆ. ಬಿ. ಕೋಳೀವಾಡ್ (ರಾಣೆಬೆನ್ನೂರು).—ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ತುಂಗಭದ್ರಾ ಮೇಲ್ದಂಡೆ ಯೋಜನೆಯ ಅಣೆಕಟ್ಟು ಕಟ್ಟುವ ಯೋಜನೆ ಯಾವ ಹಂತದಲ್ಲಿದೆ ?

ಆ) ಸದರಿ ಯೋಜನೆಯ ಕರಡನ್ನು ಕೇಂದ್ರ ಸರಕಾರದ ಮಂಜೂರಾತಿಗೆ ಕಳುಹಿಸಲಾಗಿದೆಯೆ?

ಇ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು, ಹಾಗೂ ಇದನ್ನು ಯಾವಾಗ ಕಳುಹಿಸಲಾಗುವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಯೋಜನೆಯನ್ನು ಕೈಬಿಡಲಾಗಿದೆ.

ಆ) ಈ ಯೋಜನೆಯನ್ನು ಕೇಂದ್ರ ಜಲ ಆಯೋಗಕ್ಕೆ ಮಾರ್ಚ್ ೧೯೬೯ರಲ್ಲಿ ಕಳುಹಿಸಲಾಗಿತ್ತು.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

## ರಾಜ್ಯದಲ್ಲಿ ಶಾಲೆಗಳಿಗೆ ಕಟ್ಟಡ ಹಾಗೂ ಉಪಾಧ್ಯಾಯರ ಕೊರತೆ ಇರುವ ಬಗ್ಗೆ

೩೩ (೨೨೬) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಕಟ್ಟಡಗಳು ಹಾಗೂ ಉಪಾಧ್ಯಾಯರುಗಳು ಇಲ್ಲದೆ ನಡೆಯುತ್ತಿರುವ ಶಾಲೆಗಳೆಷ್ಟು ?

ಆ) ಈ ತೊಂದರೆಗಳನ್ನು ಬಗೆಹರಿಸಲು ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ೧. ಪ್ರಾಥಮಿಕ ಶಾಲೆಗಳು—೩೧೦೭ ಶಿಕ್ಷಕರಿಲ್ಲದೆ ನಡೆಯುತ್ತಿರುವ ಶಾಲೆಗಳು ಈವರೆಗೆ
೨. ಪ್ರೌಢಶಾಲೆಗಳು — ೭೧೧ ಇಲಾಖೆಯ ಗಮನಕ್ಕೆ ಬಂದಿಲ್ಲ.

ಆ) ಕಟ್ಟಡಗಳಿಲ್ಲದೆ ತೊಂದರೆಗಳಿರುವ ಶಾಲೆಗಳಿಗೆ ಆದ್ಯತೆಯ ಮೇಲೆ ಹಣ ಒದಗಿಸಿ ಕಟ್ಟಡ ನಿರ್ಮಿಸಲಾಗುತ್ತಿದೆ ಹಾಗೂ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತುಂಬುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

## ವಿದ್ಯಾ ವಿಕಾಸ ಯೋಜನೆ

೩೪ (೨೫೯) ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ವಿದ್ಯಾ ವಿಕಾಸ ಯೋಜನೆಯಲ್ಲಿ ಸರ್ಕಾರಿ ಶಾಲೆಗಳಲ್ಲಿನ ೧ ಮತ್ತು ೨ನೇ ತರಗತಿಯ ವಿದ್ಯಾರ್ಥಿಗಳಿಗೆ ಸಮವಸ್ತ್ರಗಳನ್ನು ಉಚಿತವಾಗಿ ನೀಡುತ್ತಿದ್ದು, ತರಗತಿ ೩ ರಿಂದ ೭ರ ವರೆಗಿನ ಹರಿಜನ-ಗಿರಿಜನ ಹೆಣ್ಣುಮಕ್ಕಳಿಗೆ ಮಾತ್ರ ನೀಡಲಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ತರಗತಿ ೩ ರಿಂದ ೭ರ ವರೆಗಿನ ಹರಿಜನ-ಗಿರಿಜನ ಗಂಡು ಮಕ್ಕಳಿಗೂ ಉಚಿತ ಸಮವಸ್ತ್ರ ನೀಡಲು ಸರ್ಕಾರದವರು ಯೋಚಿಸಿರುವರೇ ?